## ಅಧ್ಯಕ್ಷರ ಅಪ್ಪಣೆಮೇರೆಗೆ ಪ್ರಸ್ತಾಪಿಸಲಾದ ವಿಷಯ

**ವಿಷಯ: ಬರಪೀಡಿತ ತಾಲ್ಲೂಕುಗಳಲ್ಲಿ ಕಂದಾಯ ವಸೂಲಾತಿಗೆ ನೀಡಿದ ಆಜ್ಞೆ.**

ಉಪಾಧ್ಯಕ್ಷರು: ಶ್ರೀ ಶಿವರಾಮೇಗೌಡರು ಬೆಳಿಗ್ಗೆಯಿಂದ ಕಂದಾಯ ಮಂತ್ರಿಗಳ ಗಮನಕ್ಕೆ ಕೆಲವು ವಿಷಯಗಳನ್ನು ತರಬೇಕೆಂದು ಇದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ: ಈಗ ಬರದ ದವಡೆಗೆ ಸಿಕ್ಕಿರತಕ್ಕಂಥ ತಾಲ್ಲೂಕುಗಳಲ್ಲಿ, ಅದರಲ್ಲೂ ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ, ನಮ್ಮ ತಾಲ್ಲೂಕು.

ಶ್ರೀ ಕೆ.ಹೆಚ್. ಪಾಟೀಲ್: ಈಗ ಆರು ಗಂಟೆ ಆಯಿತು, ವೇಳೆ ಹೆಚ್ಚಾಗುತ್ತದೆ.

ಉಪಾಧ್ಯಕ್ಷರು: ಅವರು ಬೆಳಿಗ್ಗೆಯಿಂದ ಕಂದಾಯ ಸಚಿವರ ಗಮನಕ್ಕೆ ಈ ವಿಷಯ ತರಬೇಕೆಂದು ನಾಲ್ಕಾರು ಸಲ ಕೇಳಿದ್ದಾರೆ. ಒಂದು ಹತ್ತು ನಿಮಿಷ ಅದಕ್ಕೆ ಕೊಟ್ಟುಬಿಟ್ಟು ಮುಗಿಸಿಬಿಡೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ: ಈಗ ತಹಸೀಲ್ದಾರರು ನಮ್ಮ ತಾಲ್ಲೂಕುಗಳಲ್ಲಿ ಕಂದಾಯ ವಸೂಲಿ ಮಾಡುವುದಕ್ಕೆ ಹೊರಟಿದ್ದಾರೆ. ನಾನೂ ಸಹಿತ ಮೊನ್ನೆ ತಹಸೀಲ್ದಾರರನ್ನು ಕರೆಯಿಸಿ ಕೇಳಿದೆ. ಅವರು ಹೇಳುತ್ತಾರೆ, ಜಿಲ್ಲಾಧಿಕಾರಿಗಳು ನಮಗೆ ಕಂದಾಯ ವಸೂಲಿ ಮಾಡಿ ಎಂದು ಹೇಳಿದ್ದಾರೆ. ಆದ್ದರಿಂದ ನಾವು ವಸೂಲು ಮಾಡುತ್ತಿದ್ದೇವೆ, ಮೇಲಿನಿಂದ ಆದೇಶ ಬಂದರೆ ನಾವು ನಿಲ್ಲಿಸುತ್ತೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ರೈತ ಬದುಕುವುದಕ್ಕೆ ದುಸ್ಥಿತಿ ಬಂದಿರತಕ್ಕಂಥ ಸಂದರ್ಭದಲ್ಲಿ ಆತ ಕಂದಾಯ ಕೊಡತಕ್ಕಂಥ ಮಟ್ಟದಲ್ಲಿ ಇಲ್ಲವೆಂಬುದು ಸರ್ಕಾರಕ್ಕೆ, ಮಾನ್ಯ ಕಂದಾಯ ಮಂತ್ರಿಗಳಿಗೆ ಈಗಾಗಲೇ ಅರ್ಥವಾಗಿದೆಯೆಂದು ನನ್ನ ಭಾವನೆ. ಆದಕಾರಣ, ತತ್‌ಕ್ಷಣ ತಾವು ಜಿಲ್ಲಾಧಿಕಾರಿಗಳಿಗೆ ಆದೇಶಕೊಟ್ಟು, ತಾವೇ ಹೇಳಿದ್ದೀರಿ. ರಾಜ್ಯದಲ್ಲಿ 35 ತಾಲ್ಲೂಕುಗಳಲ್ಲಿ ಈಗ ಬರ ಇದೆಯೆಂದು. ಈ ತಾಲ್ಲೂಕುಗಳಲ್ಲಿ ಕಂದಾಯ ವಸೂಲು ಮಾಡತಕ್ಕದ್ದನ್ನು ತಡೆಗಟ್ಟಬೇಕೆಂದು ತಾವು ಆದೇಶ ಕೊಡಬೇಕು. ಇನ್ನೊಂದು ಅಲ್ಲಿ ಹೇಳುತ್ತಾರೆ, ಈ ವರ್ಷದ ಕಂದಾಯ ಬೇಡ, ಹಳೆ ಕಂದಾಯ ವಸೂಲು ಮಾಡುತ್ತೇವೆ ಎಂದು. ಕಂದಾಯ ಕೊಡತಕ್ಕಂಥ ಚೈತನ್ಯ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ರೈತ ಇರಬೇಕಾದರೆ ಅದನ್ನು ಸಹಿತ ಈ ವರ್ಷ ವಸೂಲು ಮಾಡದಂತೆ ಆದೇಶ ಕೊಡಬೇಕೆಂದು ಹೇಳಿ ಮಾನ್ಯ ಕಂದಾಯ ಮಂತ್ರಿಗಳು ಸಭೆಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ಈಗಾಗಲೇ ಕಂದಾಯ ಕಾನೂನಿನಲ್ಲಿ ಸ್ಪಷ್ಟವಾಗಿದೆ. ಯಾವ ವರ್ಷ ಬರ ಇರುತ್ತದೆ. ಕಂದಾಯ ಸೂಟು ಮಾಡುತ್ತಾರೆ. ಆ ವರ್ಷಕ್ಕೆ ವಸೂಲು ಮಾಡಬಾರದು. ಅಂದಮೇಲೆ ಹಿಂದಿನ ಸಾಲಿನದ್ದಂತೂ ವಸೂಲು ಮಾಡಲಿಕ್ಕೇ ಬರುವುದಿಲ್ಲ. ಅದು ಕಂದಾಯ ಇರಬಹುದು, ತಕಾವಿ ಸಾಲ ಇರಬಹುದು, ಯಾವುದೇ ಜನರಿಂದ ಬರತಕ್ಕಂಥ ಬಾಕಿ ಇದ್ದರೂ ಸಹಿತ ಅದನ್ನು ವಸೂಲಿ ಮಾಡಲಿಕ್ಕೆ ಬರುವುದಿಲ್ಲ. ಆದರೆ ಕಾನೂನಿಗೆ ತದ್ವಿರುದ್ಧವಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ಈ ವರ್ಷ ಬರ ಇದೆ, ಆದ್ದರಿಂದ ಹಿಂದಿನ ವರ್ಷದ್ದು ಕೇಳುತ್ತೇವೆ ಎಂದರೆ ಅದು ಕಾನೂನುಬಾಹಿರವಾದದ್ದು. ಇದು ರೈತರ ಮೇಲೆ ದೌರ್ಜನ್ಯ ಮಾಡತಕ್ಕಂಥ ಕೆಲಸ. ಆದ್ದರಿಂದ ಇದನ್ನು ಕೂಡಲೇ ನಿಲ್ಲಿಸಬೇಕು. ತಾವು ಹೇಳಿದ್ದರೂ ಕೂಡ ಅಧಿಕಾರಿಗಳು ರೈತರ ಮೇಲೆ ಹೀಗೆ ಒತ್ತಾಯ ಮಾಡುತ್ತಿರುವುದು ತಿಳಿಯಲಾಗಿದೆ. ಮತ್ತೆ ರೈತರಿಂದ ಬರತಕ್ಕಂಥ ಲಾವಣಿ ಹಣ ಏನಿದೆ, ಅದನ್ನು ಜಪ್ತಿಮಾಡಿ ವಸೂಲು ಮಾಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಈ ವಸೂಲಾತಿ ಕಾರ್ಯಕ್ರಮವನ್ನು ಕೂಡಲೇ ಬಂದ್. ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಗಂಗಾಧರಗೌಡ: ಗೇಣಿದಾರರು ಏನಿದ್ದಾರೆ, ಅವರ ಕಂತುಗಳನ್ನು ಮಾಫಿ ಮಾಡುತ್ತೇವೆ ಎಂದು ಸರ್ಕಾರ ತೀರ್ಮಾನ ಮಾಡಿದೆ. ಕಂತುಗಳನ್ನು ಎಲ್.ಡಿ.

ಬ್ಯಾಂಕುಗಳಲ್ಲಿ ವಸೂಲಿ ಮಾಡುತ್ತಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳು ಮತ್ತು ಸಹಕಾರ ಮಂತ್ರಿಗಳು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಬೆಳಿಗ್ಗೆ ಅವರು ಕೊಟ್ಟ ಹೇಳಿಕೆ ಸರಿಯಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಈ ವಿಷಯ ನನ್ನ ಗಮನಕ್ಕೆ ಬಂದಿದೆ. ಮತ್ತು ಮಾನ್ಯ ಅನೇಕ ಸದಸ್ಯರು ಸದನದ ಒಳಗಡೆ ಮತ್ತು ಹೊರಗಡೆ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊನ್ನೆ ಕೂಡ ನಮ್ಮ ರೈತಸಂಘದ ಸಭೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಸುಮಾರು 26-27 ಬೇಡಿಕೆಗಳಲ್ಲಿ ಇದೂ ಒಂದು ಇದೆ. ಇದನ್ನು ಬಹಳ ಒತ್ತಾಯ ಮಾಡುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಶ್ರೀ ಶಿವರಾಮೇಗೌಡ ಹೇಳುತ್ತಿದ್ದಾರೆ. ಈ ವರ್ಷದ ಕಂದಾಯ ಬಿಟ್ಟು ಹಳೆಯ ಬಾಕಿಯನ್ನು ವಸೂಲು ಮಾಡುವುದಕ್ಕೆ ಅನೇಕ ಕಡೆ ತಹಸೀಲ್ದಾರರು, ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು, ಕಂದಾಯ ಇಲಾಖೆಯ ಜನರು ಹೋಗುತ್ತಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ನಾವು ಈಗಾಗಲೇ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. ಅದರ ಬಗ್ಗೆ ವಿವರವಾಗಿ ಮಾನ್ಯ ಮುಖ್ಯಮಂತ್ರಿಗಳು ನಾಳೆ ಸದನದಲ್ಲಿ ಒಂದು ಹೇಳಿಕೆಯನ್ನು ಮಾಡುವವರಿದ್ದಾರೆ. ರೈತರ ಸಾಲ ಮಾಫಿ ಮಾಡುವುದು. ಆಮೇಲೆ ರೈತರ ಬೇರೆ ಬೇರೆ ಬೇಡಿಕೆಗಳು ಏನಿವೆ, ಎಲೆಕ್ಟ್ರಿಸಿಟಿ ಇರಬಹುದು, ಡ್ಯೂಸ್ ಇರಬಹುದು.. ಇವು ರೈತರ ಸಮಂಜಸವಾದ ಹಕ್ಕುಗಳು ಎಂದು ಹೇಳಿ, ಬೇಡಿಕೆಗಳನ್ನು ರೈತಸಂಘದವರು ಇಟ್ಟಿದ್ದಾರೆ. ಈ ಬಗ್ಗೆ ಸರ್ಕಾರದ ಅನಿಸಿಕೆಯೂ ಇದೆ. ಈ ವಿಚಾರದಲ್ಲಿ ರೈತಸಂಘದವರ ಭಾವನೆ, ನಮ್ಮ ಭಾವನೆ ಬೇರೆ ಇಲ್ಲ. ರೈತರ ಸಮಸ್ಯೆಗಳನ್ನು, ಎಷ್ಟರಮಟ್ಟಿಗೆ ಬಗೆಹರಿಸಬೇಕೆಂಬುದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೆ. ನಾನು ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಸಾಲ ವಸೂಲಾತಿಯನ್ನು ಕಡ್ಡಾಯವಾಗಿ ಮಾಡಬಾರದು ಎಂದು ರೀಸೆಂಟ್ ಆಗಿ 3-4 ದಿವಸಗಳ ಹಿಂದೆ ಸುತ್ತೋಲೆಯನ್ನು ಕಳುಹಿಸಿದ್ದೇವೆ. ಇದರ ಬಗ್ಗೆಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ನಮ್ಮ ಇಲಾಖಾವತಿಯಿಂದ ಈಗಾಗಲೇ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. ಎಲ್ಲಿ 10 ಸಾವಿರಕ್ಕಿಂತ ಕಡಿಮೆ ಸಾಲ ಇದೆ, ಅದನ್ನು ತಡೆಹಿಡಿಯಬೇಕು, ವಸೂಲಾತಿ ಮಾಡಬಾರದು ಎಂದು ಹೇಳಿದ್ದೇವೆ. ಒಂದು ವೇಳೆ ಯಾರಾದರೂ ಆ ರೀತಿ ವಸೂಲು ಮಾಡಿದರೆ, ಸರ್ಕಾರ ಗಮನದಲ್ಲಿಟ್ಟು ಅಂತಹ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಈ ಸುತ್ತೋಲೆಯಲ್ಲಿ ನಮೂದು ಮಾಡಿ ಕಳುಹಿಸಿದ್ದೇವೆ. ನಾನು ಸವಿಸ್ತಾರವಾಗಿ ಏಕೆ ಪ್ರಸ್ತಾಪ ಮಾಡುತ್ತಾ ಇಲ್ಲ ಎಂದರೆ, ಮಾನ್ಯ ಮುಖ್ಯಮಂತ್ರಿಗಳು, ನಮ್ಮ ರೈತರ ಸಮಸ್ಯೆಗಳ ಬಗ್ಗೆ ವಿಸ್ತಾರವಾದ ಹೇಳಿಕೆಯನ್ನು ನಾಳೆ ಕೊಡುವವರಿದ್ದಾರೆ, ಅದಕ್ಕಾಗಿ ಇಷ್ಟು ಮಾತ್ರ ಹೇಳುತ್ತೇನೆ. ರೈತರಿಗೆ ಯಾವ ಹೆರಾಸ್‌ಮೆಂಟ್ ಇಲ್ಲದೆ, ಅನಾನುಕೂಲ ಆಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ ಎಂಬ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

ಉಪಾಧ್ಯಕ್ಷರು: ಅರ್ಧಗಂಟೆ ಕಾಲಾವಧಿ ಚರ್ಚೆಯನ್ನು ನಾಳೆಗೆ ಮುಂದೂಡಲಾಗಿದೆ. ಈಗ ಸಭೆಯನ್ನು ನಾಳೆ ಬೆಳಿಗ್ಗೆ 9-00 ಘಂಟೆಗೆ ಮುಂದೂಡಲಾಗಿದೆ.

ಸದನವು ಸಂಜೆ 6-07ಕ್ಕೆ ಮುಕ್ತಯವಾಗಿ, ಮತ್ತೆ ನಾಳೆ ಬೆಳಿಗ್ಗೆ 9-00 ಗಂಟೆಗೆ ಸೇರಲು ನಿಶ್ಚಯಿಸಿತು.

---

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)